ಹತ್ತೋದಿಲ್ಲೇನು?' ಲವನು ಮುದ್ದಾಗಿ ಕೇಳಿದ.

'ಬೇಡ ಮಗಾ. ನನಗೆ ನಡೆಯುವುದೇ ಇಷ್ಟ' ಎಂದಳು ಸೀತೆ, ತಾನು ಪಟ್ಟದಾನೆಯ ಮೇಲೆ ಮೆರೆದ ಆ ದಿನಗಳನ್ನು ಮೆಲುಕು ಹಾಕುತ್ತಾ. ಸೀತೆಗೆ ಆನೆಯೆಂದರೆ ಭಯವೆಂದುಕೊಂಡಿದ್ದಾರೆ ಪುಟಾಣಿಗಳಿಬ್ಬರೂ. 'ಪಾಪ, ಅಮ್ಮನಿಗೆ ಆನೆ ಹತ್ತಲಾದೀತೇನು? ಭಯವೂ ಕೂಡ' ಕುಶನು ಲವನನ್ನು ಗದರಿದ. ನಂತರ ಅವರಿಬ್ಬರೂ ಕಾಡಿನಲ್ಲಿ ತಮಗೆ ಪರಿಚಯವಾದ ಜಂತುಜಾಲವನ್ನೆಲ್ಲಾ ತಾಯಿಗೆ ತೋರಿಸುತ್ತಾ ನಡೆದರು. ಎಷ್ಟು ದೂರ ನಡೆದರೂ ಮಕ್ಕಳಿಬ್ಬರ ಮುದ್ದಾದ ಮಾತುಗಳಿಂದಾಗಿ ದಣಿವೇ ತಿಳಿಯಲಿಲ್ಲ ಸೀತೆಗೆ.

'ಇದೇ ಅಮ್ಮಾ ಆ ಉದ್ಯಾನವನ'

ಸೀತೆ ನಡೆಯುವುದನ್ನು ನಿಲ್ಲಿಸಿ ಅಲ್ಲೇ ನಿಂತಳು. ನಿಸರ್ಗದ ಮಧುರಹಾಸದಂತೆ ತೋರುವ ಆ ತೋಟವನ್ನು ಹಾಗೆಯೇ ನೋಡುತ್ತಾ ಇದ್ದುಬಿಡಬೇಕೆನಿಸಿತು ಆಕೆಗೆ. ಇದರ ಹೋಲಿಕೆಗೆ ಅಶೋಕವನವು ಏನೂ ಅಲ್ಲವೆಂದು ಸಹ ಅನಿಸಿತು.

'ನೀನು ಧನ್ಯಳು ಶೂರ್ಪನಖಿ!' ಎಂದುಕೊಂಡಳು ಸೀತೆ ಮನದೊಳಗೆ.

'ಬಾ ಅಮ್ಮಾ, ಒಳಗೆ ಹೋಗೋಣ' ಎಂದವು ಮಕ್ಕಳು.

'ನಾನೊಬ್ಬಳೇ ಹೋಗುವೆ. ನೀವು ಸಂಜೆಯವರೆಗೂ ಕಾಡುಸುತ್ತಿ ಬನ್ನಿ. ಆಮೇಲೆ ಮೂವರೂ ಸೇರಿ ಆಶ್ರಮಕ್ಕೆ ಮರಳೋಣವಂತೆ' ಮಕ್ಕಳು ಅತ್ತ ಹೋದಮೇಲೆ ಸೀತೆ ಉದ್ಯಾನವನದೊಳಗೆ ಬಂದಳು.

***

ದೂರದಲ್ಲೊಬ್ಬ ಹೆಂಗಸು ನಿಂತಿದ್ದಳು. ಆಕೆ ಆ ಕಡೆಗೆ ಮುಖಮಾಡಿದ್ದರೂ, ಆ ಆಕಾರವನ್ನು ನೋಡಿ ಶೂರ್ಪನಖಿಯೇ ಇರಬಹುದೆಂದುಕೊಂಡಳು ಸೀತೆ. ಹತ್ತಿರಕ್ಕೆ ಹೋಗಿ 'ಶೂರ್ಪನಖಿ!' ಎಂದು ಮೆಲ್ಲದನಿಯಲ್ಲಿ ಕರೆದಳು. ಕರೆ ಕೇಳಿದ ಹೆಂಗಸು ಹಿಂದಿರುಗಿ ನೋಡಿದಳು. ಆಕೆಗೆ ಸೀತೆಯನ್ನು ಗುರುತು ಹಿಡಿಯಲಾಗಲಿಲ್ಲ.

'ಯಾರಮ್ಮಾ ನೀನು? ದಾರಿತಪ್ಪಿ ಬಂದೆಯೇನು? ನನ್ನ ಹೆಸರು ಹೇಗೆ ಗೊತ್ತು?'

'ದಾರಿತಪ್ಪಿ ಬರಲಿಲ್ಲ ಶೂರ್ಪನಖಿ. ದಾರಿ ಹುಡುಕುತ್ತಲೇ ಬಂದಿದ್ದೇನೆ. ನಾನು ಸೀತೆ'

ಶೂರ್ಪನಖಿಗೆ ಮಾತೇ ಬರದಂತಾಯಿತು.

'ಏನು! ಸೀತೆ? ಈಕೆ ಸೀತೆಯಾ? ಎಷ್ಟು ಬದಲಾಗಿದ್ದಾಳೆ!' ಮೈತುಂಬಾ ಆಭರಣಗಳ ಭಾರ ಹೊತ್ತು ಶೋಭಿಸುತ್ತಿದ್ದ ಸೀತೆ ಮಾತ್ರ ತನಗೆ ಗೊತ್ತು. ಅದೂ ತುಂಬಾ ಹೊತ್ತು ನೋಡಿರಲಿಲ್ಲ. ರಾವಣನನ್ನು ಸಂಹರಿಸಿ ಆರ್ಯ ಸಾಮ್ರಾಜ್ಯವನ್ನು ದಕ್ಷಿಣಪಥಕ್ಕೆಲ್ಲಾ ವಿಸ್ತರಿಸಿದ ಚಕ್ರವರ್ತಿ ಶ್ರೀರಾಮಚಂದ್ರನ ಪಟ್ಟಮಹಿಷಿ ಸೀತೆಯಾ ಈಕೆ? ಶೂರ್ಪನಖಿಗೆ ನಂಬಲಾಗುತ್ತಿಲ್ಲ.

ಈ ನಾರಿನ ಸೀರೆಯೇನು? ಹೂಮಾಲೆಗಳ ಈ ಕೇವಲ ಅಲಂಕರಣವೇನು? ಬಿಸಿಲಿಗೆ ಕಂದುಹೋದ ಆ ಬಂಗಾರದ ಛಾಯೆ ಏನು? ನಿಜಕ್ಕೂ ಶ್ರೀರಾಮಚಂದ್ರನ ಪತ್ನಿ ಸೀತೆಯಾ ಈಕೆ?

'ಸೀತೆ ಎಂದರೆ ಶ್ರೀರಾಮಚಂದ್ರನ...'

ಶೂರ್ಪನಖಿಯ ಪ್ರಶ್ನೆ ಮುಗಿಯುವ ಮುನ್ನವೇ– 'ನಾನು ಸೀತೆ, ಜನಕನ ಮಗಳು, ಜಾನಕಿ, ಭೂಪುತ್ರಿ' ಎಂದಳು ಹೆಮ್ಮೆಯಿಂದ. 'ಹಾಗಾದರೆ ಶ್ರೀರಾಮ?' ಶೂರ್ಪನಖಿಗೆ ಎಲ್ಲವೂ ಅಯೋಮಯವೆನಿಸಿತು. 'ಶ್ರೀರಾಮ ನನ್ನನ್ನು ತ್ಯಜಿಸಿದ್ದಾನೆ. ನಾನೀಗ ವಾಲ್ಮೀಕಿಯ ಆಶ್ರಮದಲ್ಲಿದ್ದೇನೆ'

ಶೂರ್ಪನಖಿಗೆ ಆಶ್ಚರ್ಯ. 'ಏನು! ರಾಮನು ಸೀತೆಯನ್ನು ಪರಿತ್ಯಜಿಸುವುದೇ! ಎಲ್ಲಾದರೂ ಉಂಟೇ?' ಅವರಿಬ್ಬರ ಪ್ರೀತಿ ತನಗೆ ಗೊತ್ತಿರುವಷ್ಟು ಚೆನ್ನಾಗಿ ಇನ್ನಾರಿಗೂ ಗೊತ್ತಿಲ್ಲ. ಅದಕ್ಕೆ ತಾನು ತೆತ್ತ ಬೆಲೆ ಕಡಿಮೆಯೇನಲ್ಲ. ಶ್ರೀರಾಮನನ್ನು ಪ್ರೀತಿಸುವ ಹೆಂಗಸರಿಗೆ ವೇದನೆ ತಪ್ಪುವುದಿಲ್ಲವೇ? ಶೂರ್ಪನಖಿಗೆ ಸೀತೆಯ ಮುಖದಲ್ಲಿ ಶಾಂತಿಗಂಭೀರತೆಗಳ ಹೊರತು ವೇದನಾ ಛಾಯೆಗಳೇನೂ ಕಾಣಲಿಲ್ಲ. ಆಕೆ ತುಂಬಾ ಮಾಗಿದ್ದಾಳೆ ಎಂದುಕೊಂಡಳು ಶೂರ್ಪನಖಿ. 'ನಿನ್ನೆ ನನ್ನ ಮಕ್ಕಳು ನಿನ್ನ ಉದ್ಯಾನವನವನ್ನು ನೋಡಿದ್ದಾರಂತೆ. ನಿನ್ನನ್ನೂ ಕೂಡ. ಈ ದಿನ ಅವರೇ ನನ್ನನಿಲ್ಲಿಗೆ ಕರೆದುಕೊಂಡು ಬಂದಿದ್ದಾರೆ. ನಿನ್ನ ತೋಟವು ತುಂಬಾ ಸುಂದರವಾಗಿದೆ. ಇಲ್ಲಿ ಮನಸ್ಸಿಗೆ ಎಷ್ಟು ಹಿತವೆನಿಸುತ್ತಿದೆ!'

'ಓ! ಆ ಪುಟಾಣಿಗಳಿಬ್ಬರೂ ನಿನ್ನ ಮಕ್ಕಳಾ–ಎಷ್ಟು ಮುದ್ದಾಗಿದ್ದಾರೆ!'

ಸೀತೆಯ ಮುಖದಲ್ಲಿ ಒಂದು ಕ್ಷಣ ಹೆಮ್ಮೆಯ ಭಾವವು ಮಿಂಚಿ ಮಾಯವಾಯಿತು. ಅದು ಶೂರ್ಪನಖಿಯ ಗಮನಕ್ಕೂ ಬಂತು.

'ಈ ತೋಟದೊಳಗಿನ ಮರ, ಗಿಡ, ಬಳ್ಳಿ ಎಲ್ಲವೂ ನನ್ನ ಮಕ್ಕಳೇ ಸೀತಾ' ಎಂದಳು ಶೂರ್ಪನಖಿ.

'ಹೌದು. ಆ ಕಾರಣಕ್ಕಾಗಿಯೇ ಇಷ್ಟು ಮನೋಹರವಾಗಿವೆ' ಸೀತೆ ಒಪ್ಪಿಕೊಂಡಳು. ಶೂರ್ಪನಖಿಯ ಕಂಗಳಲ್ಲಿ ಧನ್ಯತಾಭಾವವು ತುಂಬಿ ತುಳುಕುತಿತ್ತು.

'ಹೇಳು ಶೂರ್ಪನಖಿ–ನಿನ್ನ ಜೀವನ ಈಗ ಹೇಗಿದೆ?'

'ಈ ಉದ್ಯಾನವನದಷ್ಟು ಅಂದವಾಗಿ, ಆನಂದವಾಗಿದೆ ಸೀತಾ'

'ನಿನ್ನನ್ನು ನೋಡಿದರೆ ಖುಷಿಯಾಗುತ್ತಿದೆ ಶೂರ್ಪನಖಿ.

ನಿನಗಾದ ಅವಮಾನಕ್ಕೆ ನೀನು ಏನಾಗುವೆಯೋ ಅಂದುಕೊಂಡಿದ್ದೆ. ನಿನ್ನ ಸೌಂದರ್ಯಕಾಂಕ್ಷೆ ಎಂತಹದ್ದೆಂದು ನನಗೆ ಗೊತ್ತು. ನಿನ್ನ ಕುರೂಪಿತನವನ್ನು ನೀನು ಸಹಿಸಕೊಳ್ಳುವೆಯೋ? ಸಹಿಸಲಾಗದೆ ಏನಾದರೂ ಮಾಡಿಕೊಂಡಿರುವೆಯೋ ಅಂದುಕೊಂಡು ನಿನ್ನ ನೆನಪಾದಾಗಲೆಲ್ಲಾ ನೊಂದುಕೊಳ್ಳುತ್ತಿದ್ದೆ.' ತನ್ನತ್ತ ನೋಡಿದ ಸೀತೆಯ ಕಂಗಳಲ್ಲಿಯ ಪ್ರೀತಿಗೆ, ಅನುಕಂಪಕ್ಕೆ ಕರಗಿ ಹೋದಳು ಶೂರ್ಪನಖಿ. ಅವರಿಬ್ಬರ ಹೃದಯಗಳಲಿ ಸ್ನೇಹ ಭಾವವು ಚಿಗುರಿ ದೇಹ ಪುಳಕಿಸಿದವು.

'ಶೂರ್ಪನಖಿ, ನೀನು ಧೈರ್ಯವಂತೆ, ಸಾಹಸಿ' ಎಂದಳು ಸೀತೆ. ಮನಪೂರ್ವಕವಾಗಿ ಸೀತೆಯೆಂದ ಆ ಮಾತು ಶೂರ್ಪನಖಿಯ ಮನದಲ್ಲಿ ಉದ್ವೇಗವನ್ನು ತುಂಬಿತು. ತನ್ನ ಜೀವನದ ಗಮನವನ್ನು ಸೀತೆಗೆ ತಿಳಿಸಬೇಕೆಂಬ ಭಾವ ಮೂಡಿತು.

'ನನ್ನ ಈ ಸದ್ಯದ ಸ್ಥಿತಿಯೇನಿದೆ– ಅದನ್ನು ದಕ್ಕಿಸಿಕೊಂಡ ಪರಿ ಸುಲಭವಾಗಿರಲಿಲ್ಲ ಸೀತಾ. ಬದುಕಿಗೆ ಎದುರು ಈಜುತ್ತಲೇ ಗಟ್ಟಿಗೊಂಡಿದ್ದೇನೆ. ಸೌಂದರ್ಯಕ್ಕೆ ನಿಜವಾದ ಅರ್ಥವೇನೆಂದು ತಿಳಿದುಕೊಳ್ಳುವುದರಲ್ಲೇ ಆನಂದವನ್ನು ಕಂಡುಕೊಂಡಿದ್ದೇನೆ. ವಿರೂಪಗೊಂಡ ಆ ದಿನಗಳಲ್ಲಿ ಬದುಕು ದುರ್ಭರವಾಗಿಯೇ ಇತ್ತು. ನನ್ನ ರೂಪ ನನಗೇ ಅಸಹ್ಯವೆನಿಸುತ್ತಿತ್ತು. ನನ್ನನ್ನು ನಾನೇ ದ್ವೇಷಿಸಿಕೊಳ್ಳುತ್ತಿದ್ದೆ. ಸಾವಿಗೆ ಶರಣಾಗಲು ಪ್ರಯತ್ನಿಸಿದ ದಿನಗಳೂ ಇವೆ. ನನಗೆ ಸೌಂದರ್ಯ ಬೇಕು. ಪ್ರೀತಿ ಬೇಕು. ಇವೆರಡೂ ಇಲ್ಲದೆ ನಾನು ಬದುಕಲಾರೆ. ಆದರೆ ಅಂಥ ನಾನು ಕುರೂಪಿಯಾದೆ. ನನ್ನ ರೂಪ ಕಂಡಿದ್ದ ಗಂಡಸರು, ನಾನು ಮೋಹಿಸಿದ ಸುಂದರವಾದ ಗಂಡಸರು ನನ್ನ ಬಗ್ಗೆ ಅಸಹ್ಯಪಡತೊಡಗಿದರು. ಇಂಥಾ ಬಾಳಾದರೂ ಏಕೆ ಅನ್ನಿಸತೊಡಗಿತು. ಆ ದಿನಗಳು ತುಂಬಾ ನರಕಪ್ರಾಯವಾಗಿದ್ದವು. ನನ್ನ ಮನ ದುಃಖದಿಂದ, ಕ್ರೋಧದಿಂದ ನಿತ್ಯ ಉರಿಯುತ್ತಲೇ ಇತ್ತು. ಶ್ರೀರಾಮನನ್ನು, ಆತನ ತಮ್ಮನನ್ನು, ಕೊನೆಗೆ ನಿನ್ನನ್ನೂ ಎಷ್ಟು ಶಪಿಸಿದ್ದೆ ಗೊತ್ತಾ! ತುಂಬಾ ವಿಷಕಾರಿದ್ದೆ ನಿಮ್ಮ ಮೇಲೆ. ನನ್ನೊಳಗೆ ಎಳ್ಳಷ್ಟು ಪ್ರೀತಿಯಾದರೂ ಇರದೆ ಬರೀ ದ್ವೇಷವೇ ತುಂಬಿಕೊಂಡಿತ್ತು. ಸೌಂದರ್ಯವನ್ನು ಆರಾಧಿಸುತ್ತಿದ್ದ ನಾನು, ಸುಂದರವಾಗಿದ್ದ ಎಲ್ಲವನ್ನೂ ದ್ವೇಷಿಸತೊಡಗಿದೆ. ನನ್ನ ಸೌಂದರ್ಯಕಾಂಕ್ಷೆ ಸುಂದರಿಯರ ಮೇಲೆ ಅಸೂಯೆಯಾಗಿ ಮಾರ್ಪಟ್ಟಿತು. ನಾನೊಂದು ನಡೆದಾಡುವ ಅಗ್ನಿಪರ್ವತವಾದೆ. ಉಕ್ಕೇರುವ ಕಣ್ಣೀರ ಕಡಲಾದೆ' ದುಃಖಮಯವಾದ ಆ ನೆನಪುಗಳಿಂದ ಇಬ್ಬರ ಹೃದಯಗಳೂ ಭಾರಗೊಂಡವು.

'ಅಂಥಾ ನೋವಿನಿಂದ ನೀನು ಹೇಗೆ ಪಾರಾದೆ ಶೂರ್ಪನಖಿ?' ಕೇಳಿದಳು ಸೀತೆ.

'ತುಂಬಾ ಕಷ್ಟಪಟ್ಟೆ ಸೀತಾ. ಸೌಂದರ್ಯದ ನಿಜವಾದ ಅರ್ಥವೇನೆಂದು ತಿಳಿದುಕೊಳ್ಳುವುದು ಸರಳವಾಗಿರಲಿಲ್ಲ. ನನಗೆ ಅಮಿತ ಸೌಂದರ್ಯದ ಗರ್ವವಿತ್ತು. ನನ್ನ ಮೂಗನ್ನು ನೋಡಿಕೊಂಡು ನಾನದೆಷ್ಟು ಬೀಗುತ್ತಿದ್ದೆನೋ ನಿನಗೆ ಗೊತ್ತಿಲ್ಲ. ನಿಮ್ಮ ಆರ್ಯರ ನೀಳವಾದ ಮೂಗುಗಳನ್ನು ನೋಡಿದರೆ ನನಗೆ ವಿಚಿತ್ರವೆನಿಸುತ್ತದೆ. ವಿಚಿತ್ರವೆಂದರೂ ಅದರೊಳಗೆ ಒಂದು ಸೌಂದರ್ಯ ಇಲ್ಲದಿರಲಾರದು. ನನ್ನ ಮೂಗೋ ನೀಳವಲ್ಲ, ಹಾಗೆಂದು ಚಪ್ಪಟೆಯೂ ಅಲ್ಲ. ಮೂಗು ಹೇಗಿರಬೇಕೆಂದು ಆ ಪರಮಾತ್ಮನು ಲೋಕಸೃಷ್ಟಿಯ ವೇಳೆಯಲಿ ಅಂದುಕೊಂಡನೋ, ನನ್ನದೂ ಅಂಥದ್ದೇ ಎಂಬ ಹೆಮ್ಮೆ ನನಗೆ. ಅದಕ್ಕೆಂದೇ ಆಗಾಗ ಹಚ್ಚನೆಯ, ಬೆಳ್ಳನೆಯ ಹುಲ್ಲಿನ ಹೂಗಳನ್ನು ನನ್ನ ಮೂಗಿಗೆ ಸಿಂಗರಿಸಿಕೊಳ್ಳುತ್ತಿದ್ದೆ. ಮೂಗುಹೊಳ್ಳೆಗಳ ಎರಡೂ ಬದಿಗೆ ಅವು ನಕ್ಷತ್ರಗಳಂತೆ ಹೊಳೆಯುತ್ತಿದ್ದವು. ನನಗೆ ಪ್ರಿಯವಾದವರು ಯಾರಾದರೂ ನನ್ನ ಮೂಗನ್ನು ಮೃದುವಾಗಿ ಚುಂಬಿಸಿದರೆ ನನಗೆ ಹೇಳತೀರದಷ್ಟು